ಶ್ರೀ ಶಶಿಕಾಂತ ಅ. ನಾಯಕ (ತೋಟಗಾರಿಕೆ ಸಚಿವರು) :–

(ಅ) ರಾಜ್ಯದಲ್ಲಿ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹನಿ ನೀರಾವರಿಗೆ ಶೇ 100 ಸಬ್ಸಿಡಿ ನೀಡಲಾಗುತ್ತಿದೆ.

(ಆ) 2003–04 ನೇ ಸಾಲಿನಿಂದ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಒಟ್ಟು 7739 ಹೆಕ್ಟೇರ್ ಪ್ರದೇಶದಲ್ಲಿ ಶೇ 100 ಸಬ್ಸಿಡಿ ಪ್ರಕಾರ ಹನಿ ನೀರಾವರಿ ಅಳವಡಿಸಲಾಗಿದೆ.

(ಇ) ಕಳೆದ ಎರಡು ವರ್ಷಗಳಲ್ಲಿ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಬಂದಂತಹ ಅರ್ಜಿಗಳ ಸಂಖ್ಯೆ ಅನುಕ್ರಮವಾಗಿ 4014 ಮತ್ತು 2276 ಹಾಗೂ ಉಳಿಕೆ ಇರುವ ಅರ್ಜಿಗಳ ಸಂಖ್ಯೆ 1605 ಮತ್ತು 1070.

763 (1028) ಶ್ರೀ ಶ್ರೀನಿವಾಸಗೌಡ (ಕೋಲಾರ) :–ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ವೈದ್ಯನಾಥನ್ ವರದಿಯನ್ನು ಸಹಕಾರ ಕಾಯ್ದೆಗೆ ಅಳವಡಿಸಲು ರಾಜ್ಯ ಸರ್ಕಾರಕ್ಕೆ ಸೂಚನೆ ಯಾವಾಗ ಬಂದಿರುತ್ತದೆ ?

(ಆ) ವೈದ್ಯನಾಥನ್ ವರದಿ ಜಾರಿ ಮಾಡುವುದರಿಂದ ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಸಹಕಾರ ಬ್ಯಾಂಕ್‌ಗಳಿಗೆ ಬರುವ ಅನುದಾನವೆಷ್ಟು ?

(ಇ) ವೈದ್ಯನಾಥನ್ ವರದಿಯನ್ನು ಜಾರಿ ಮಾಡಲಾಗುವುದೇ ?

(ಈ) ಹಾಗಿದ್ದಲ್ಲಿ, ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು) :–

(ಅ) ಭಾರತ ಸರ್ಕಾರವು ಸಹಕಾರಿ ಕೃಷಿ ಪತ್ತಿನ ಸಂಘಗಳ ಪುನಃಶ್ಚೇತನದ ಬಗ್ಗೆ ಪ್ರೊ.ಎ. ವೈದ್ಯನಾಥನ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ ಕಾರ್ಯಪಡೆಯು ದಿನಾಂಕ 15.02.2005 ರಂದು ಭಾರತ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿರುತ್ತದೆ. ಭಾರತ ಸರ್ಕಾರವು ಸದರಿ ಕಾರ್ಯಪಡೆಯ ವರದಿಯನ್ನು ತತ್ವಶಃ (in-principle) ಒಪ್ಪಿಕೊಂಡು ತತ್ಸಂಬಂಧದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ದಿಸೆಯಲ್ಲಿ ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಿ ಸೆಪ್ಟೆಂಬರ್–ಅಕ್ಟೋಬರ್ 2005 ರಲ್ಲಿ ಪರಿಷ್ಕೃತ ಪುನಶ್ಚೇತನ ಪ್ಯಾಕೇಜನ್ನು ರೂಪಿಸಿರುತ್ತದೆ. ಸದರಿ ಪುನಶ್ಚೇತನ ಪ್ಯಾಕೇಜನ್ನು ಒಪ್ಪಿಕೊಳ್ಳಲು ರಾಜ್ಯ ಸರ್ಕಾರಗಳಿಗೆ ಕಳುಹಿಸಿರುತ್ತದೆ.

(ಆ) ಪ್ರೊ॥ ಎ. ವೈದ್ಯನಾಥನ್ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ಭಾರತ ಸರ್ಕಾರವು ರೂಪಿಸಿರುವ ಪುನಶ್ಚೇತನ ಪ್ಯಾಕೇಜನ್ನು ಒಪ್ಪಿಕೊಂಡಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ ರಾಜ್ಯದ ಅಲ್ಪಾವಧಿ ಕೃಷಿ ಪತ್ತಿನ ಸಂಸ್ಥೆಗಳ ಪುನಶ್ಚೇತನಕ್ಕಾಗಿ ಲಭ್ಯವಾಗಬಹುದಾದ ಮೊಬಲಗು ಕೆಳಗಿನಂತಿದೆ.

ಭಾರತ ಸರ್ಕಾರದ ಪಾಲು	325.48 ಕೋಟಿ ರೂ.
ರಾಜ್ಯ ಸರ್ಕಾರದ ಪಾಲು	128.72 ಕೋಟಿ ರೂ.
ಕೃಷಿ ಪತ್ತಿನ ಸಂಸ್ಥೆಗಳು ಧರಿಸಬೇಕಾದುದು	14.8 ಕೋಟಿ ರೂ.

ಈ ಅಂಕಿ ಅಂಶಗಳು ತಾತ್ಕಾಲಿಕವಾಗಿದ್ದು ನಬಾರ್ಡು ಕೃಷಿ ಪತ್ತಿನ ಸಹಕಾರ ಸಂಘಗಳ ವಿಶೇಷ ಆಡಿಟ್ ಮಾಡಿದ ನಂತರ ವ್ಯತ್ಯಾಸವಾಗಬಹುದು.

(ಇ) ಮತ್ತು (ಈ) ಸದರಿ ಪ್ಯಾಕೇಜಿನ ಶಿಫಾರಸ್ಸುಗಳನ್ನು ಅಂಗೀಕರಿಸುವ ವಿಷಯವು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

764 (823) ಡಾ॥ ಸುಧಾಕರ್ ಎಂ.ಸಿ. (ಚಿಂತಾಮಣಿ) :–ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) 2006–07 ನೇ ಸಾಲಿನಲ್ಲಿ ಚಿಂತಾಮಣಿ ತಾಲ್ಲೂಕಿನ ತೋಟಗಾರಿಕೆ ಇಲಾಖೆಯ ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ಪುರಸ್ಕೃತವಾದ ಅರ್ಜಿಗಳೆಷ್ಟು ;

(ಆ) ಈ ಯೋಜನೆಗೆ ಇದುವರೆವಿಗೂ ಬಿಡುಗಡೆಯಾದ ಹಣ ಎಷ್ಟು ;

(ಇ) ಬಾಕಿ ಉಳಿದ ಹಣವನ್ನು ಎಷ್ಟು ಕಾಲಾವಧಿಯೊಳಗೆ ಬಿಡುಗಡೆ ಮಾಡಲಾಗುವುದು.

ಶ್ರೀ ಶಶಿಕಾಂತ ಅ. ನಾಯಕ (ತೋಟಗಾರಿಕೆ ಸಚಿವರು) :–

(ಅ) 2006–07 ನೇ ಸಾಲಿನಲ್ಲಿ ಚಿಂತಾಮಣಿ ತಾಲ್ಲೂಕಿನಲ್ಲಿ ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ 190 ಅರ್ಜಿಗಳು ಪುರಸ್ಕೃತವಾಗಿದೆ.

(ಆ) ರೂ. 97.91 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

(ಇ) ಆದಷ್ಟು ಶೀಘ್ರ ಬಿಡುಗಡೆ ಮಾಡಲಾಗುವುದು.

766 (927) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) :–ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–